OFFICE OF THE PRESIDENT, TALUK BOARD, BELUR.

No. LBD 31/63-64, dated 14th February 1964.

Notice is hereby given to the inhabitants of the Belur Taluk, that the Taluk Board desires to levy a tax on animals brought for sale in the markets established by the Taluk Board within its jurisdictions defined in the rules appended and at the rates mentioned therein.

Any inhabitant of the Taluk objecting to the proposed tax may within one month from the date of this notice send his objection in writing to the Taluk Board.

ನಿಯಮಾವಳಿ :

ಬೇಲೂರು ತಾಲ್ಲೂಕು ಬೋರ್ಡಿಗೆ ಒಳಪಟ್ಟ ಸಂತೆ ಮತ್ತು ಮಾರುಕಟ್ಟೆಗಳಲ್ಲಿ ವ್ಯಾಪಾರಕ್ಕಾಗಿ ಬರತಕ್ಕ ಪ್ರಾಣಿ ಪಕ್ಷಿಗಳ ಮೇಲೆ ವಿಧಿಸಬೇಕೆಂದಿರುವ ತೆರಿಗೆಗಳ ನಿಯಮಾವಳಿಗಳು.

೧. ಈ ನಿಯಮಾವಳಿಗಳನ್ನು ಬೇಲೂರು ತಾಲ್ಲೂಕಿನ ಸಂತೆ ಮತ್ತು ಮಾರುಕಟ್ಟೆಗಳಲ್ಲಿ ವ್ಯಾಪಾರಕ್ಕಾಗಿ ಬರತಕ್ಕ ಪ್ರಾಣಿ ಮತ್ತು ಪಕ್ಷಿಗಳ ಮೇಲೆ ವಿಧಿಸಿ ವಸೂಲ್ ಮಾಡಲಾಗುವ ತೆರಿಗೆದರಗಳ ನಿಯಮಾವಳಿಗಳು ಎಂದು ತಿಳಿಯತಕ್ಕದ್ದು.

೨. ಈ ತೆರಿಗೆಯು ಈ ನಿಯಮಾವಳಿಗಳು ಮೈಸೂರು ವಿಭಾಗದ ಕಮೀಷನರ್ ರವರ ಮಂಜೂರಾತಿಯನ್ನು ಪಡೆದ ನಂತರ ಜಾರಿಗೆ ಬರತಕ್ಕದ್ದಾಗಿರುತ್ತೆ. ಜಾರಿಗೆ ತರಲಾಗಿರುವ ತೆರಿಗೆ ಪಟ್ಟಿಯ ಪ್ರಕಟಣೆಯಾದ ತಾರೀಖಿನಿಂದ ಒಂದು ತಿಂಗಳವರೆಗೆ ಈ ಬಗ್ಗೆ ಸಾರ್ವಜನಿಕರಿಂದ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಈ ಕಛೇರಿಯಲ್ಲಿ ಸ್ವೀಕರಿಸಲಾಗುವುದು. ನಂತರ ಬಂದವುಗಳಿಗೆ ಮನ್ನಣೆ ನೀಡಲಾಗುವುದಿಲ್ಲ.

೩. ಈ ನಿಯಮಾವಳಿಗಳಲ್ಲಿ ಉಪಯೋಗಿಸಲಾಗುವ ಶಬ್ದಗಳಿಗೆ ಮೈಸೂರು ಗ್ರಾಮ ಪಂಚಾಯಿತಿ ಮತ್ತು ಸ್ಥಳೀಯ ಸಂಸ್ಥೆಗಳ ನಿರ್ಣಯ ಕಾಯಿದೆಗಳಲ್ಲಿ ಮನ್ನಣೆ ಪಡೆದಿರುವ ಅರ್ಥಗಳು ಮಾತ್ರ ಅನ್ವಯಿಸುತ್ತವೆ.

೪. ಈ ನಿಯಮಾವಳಿಗಳು ಜಾರಿಗೆ ಬಂದನಂತರದಾರು ತಲಾ ಒಂದಕ್ಕೆ ಹನ್ನೆರಡು ನಯಾಪೈಸೆ, ಜೊತೆ ಒಂದಕ್ಕೆ ಇಪ್ಪತ್ತೈದು ನಯಾ ಪೈಸೆಗಳಂತೆಯೂ ತೋಳೆ ಮತ್ತು ಇತರ ಪಕ್ಷಿಗಳಿಗೆ ತಲಾ ಒಂದಕ್ಕೆ ಐದು ನಯಾ ಪೈಸೆಗಳಂತೆಯೂ ಸುಂಕ ವಸೂಲ್ ಮಾಡಲಾಗುವುದು.

೫. ಈ ಮೇಲೆ ನಿಗದಿಯಾಗಿರುವ ತೆರಿಗೆಯಂ ದಿನ ಒಂದಕ್ಕೆ ಮಾತ್ರ ಅನ್ವಯಿಸುತ್ತದೆ. ವ್ಯಾಪಾರವನ್ನು ಒಂದು ದಿನಕ್ಕಿಂತ ಹೆಚ್ಚು ಮುಂದುವರಿದಲ್ಲಿ ಅಂತಹ ಹೆಚ್ಚಿಗೆ ದಿವಸಗಳಿಗೆ ಪ್ರತ್ಯೇಕ ತೆರಿಗೆ ವಸೂಲ್ ಮಾಡಲಾಗುತ್ತೆ.

೬. ತೆರಿಗೆ ಪಾವತಿ ಮಾಡುವ ರೀತಿ ಪಡೆಯುವ, ಇತ್ಯಾದಿ ವಿಷಯಗಳಲ್ಲಿ ಉಂಟಾಗಬಹುದಾದ ಆಕ್ಷೇಪಣೆಗಳನ್ನು ಬಗೆಹರಿಸಲು ಬೇಲೂರು ತಾಲ್ಲೂಕು ಅಭಿವೃದ್ಧಿ ಮಂಡಲಿಯ ಚೀಫ್ ಎಗ್ಸಿಕ್ಯೂಟಿವ್ ಆಫೀಸರವರು ಅಧಿಕಾರ ಹೊಂದಿರುತ್ತಾರೆ.

ಕೆ. ಸಿ ಪುಟ್ಟೇಗೌಡ,
ಅಧ್ಯಕ್ಷರು,
ತಾಲ್ಲೂಕು ಬೋರ್ಡ್, ಬೇಲೂರು.

ಜಾ.ಂ

Printed by the Director of Printing, Sty & Publications at the Govt. Press, Bhav